# ಖಾಸಗಿ ಪ್ರೌಢಶಾಲೆ (8ನೇ ತರಗತಿಯಿಂದ) ಶಾಲೆಗಳನ್ನು ಪ್ರಾರಂಭಿಸುವುದರ ಬಗ್ಗೆ ಮಾಹಿತಿ.

**(ಈ ಮಾಹಿತಿಯು IINDICATIVE ಮಾತ್ರ. ಪೂರ್ಣ ಮತ್ತು ಅಧಿಕೃತ ಮಾಹಿತಿಗಾಗಿ ಸಂಬಂಧಿಸಿದ ಸರಕಾರದ ಆದೇಶ, ನಿಯಮಗಳು ಮತ್ತು ಕಾಯ್ದೆಗಳನ್ನು ದಯವಿಟ್ಟು ನೋಡುವುದು)**

ಖಾಸಗಿ ಖಾಸಗಿ ಪ್ರೌಢಶಾಲೆಯನ್ನು ಯಾವುದೇ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಾಯಿಸಿದ ಟ್ರಸ್ಟ್ ಅಥವಾ ಸಹಕಾರ ಕಾಯ್ದೆ ಪ್ರಕಾರ ನೋಂದಾಯಿಸಿದ ಸೊಸೈಟಿ (ಸಹಕಾರ ಸಂಘ) ಪ್ರಾರಂಭಿಸಬಹುದು. ಹೀಗೆ ಹೊಸದಾಗಿ ಪ್ರಾರಂಭಿಸಬೇಕಾದರೆ ಇಲಾಖೆಯ ಅನುಮತಿ, ನೋಂದಣಿ ಮತ್ತು ಮಾನ್ಯತೆಯನ್ನು ಪಡೆಯಬೇಕಾಗುತ್ತದೆ. ಈ ಸಂಬಂಧದಲ್ಲಿ ಸರ್ಕಾರ ಹಲವಾರು ನೀತಿ ನಿಯಮಗಳನ್ನು ವಿಧಿಸಿದೆ. 1983ರ ಶಿಕ್ಷಣ ಮಸೂದೆಯ ನಿಯಮಗಳು ನೂತನ ಶಾಲೆಗಳನ್ನು ಪ್ರಾರಂಭಿಸಲು ಇರುವ ಅಧಿಕೃತ ನಿಯಮಗಳಾಗಿವೆ.

ಖಾಸಗಿ ಪ್ರೌಢಶಾಲೆಯನ್ನು ಪ್ರಾರಂಭಿಸಬೇಕಾದಲ್ಲಿ ಅನುಸರಿಸಬೇಕಾದ ನಿಬಂಧನೆಗಳು ಮತ್ತು ನಿಯಮಗಳು ಈ ಕೆಳಕಂಡಂತಿವೆ.

1) ಪ್ರೌಢಶಾಲೆಗೆ ದಾಖಲು ಮಾಡಿಕೊಳ್ಳಬೇಕಾದ ತರಗತಿಗಳು 8,9,10ನೇ ತರಗತಿಗಳಿಗೆ ಸಹಜ ಬೆಳವಣಿಗೆಯಂತೆ ಮಾತ್ರ ದಾಖಲು ಮಾಡಿಕೊಳ್ಳುವುದು.
2) ಪ್ರೌಢಶಾಲೆಯನ್ನು ಪ್ರಾರಂಭಿಸುವ ಸ್ಥಳದಲ್ಲಿ ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳು ಇದ್ದಲ್ಲಿ ಅನುಮತಿ ನೀಡುವುದಿಲ್ಲ.
3) ಪ್ರೌಢಶಾಲೆಯನ್ನು ನಡೆಸಲು ಕನ್ನಡ, ಮಾತೃಭಾಷೆ ಅಥವಾ ಆಂಗ್ಲ ಮಾಧ್ಯಮದಲ್ಲಿ ನಡೆಸಲು ಷರತ್ತುಗಳನ್ನುನುಸರಿಸಿ ಅನುಮತಿ ನೀಡಲಾಗುವುದು.
4) ಪ್ರೌಢಶಾಲೆ ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷದ ಮಾರ್ಚ್ 31ರೊಳಗೆ ಅರ್ಜಿಯನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು. ನಂತರ 2 ತಿಂಗಳೊಳಗೆ ಅರ್ಜಿಗೆ ಅನುಮತಿ ಅಥವಾ ನಿರಾಕರಣೆಯನ್ನು ತಿಳಿಸಲಾಗುವುದು.
5) ಅರ್ಜಿಯ ಜೊತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕಾದ ಲಗತ್ತುಗಳು ಈ ಕೆಳಕಂಡಂತಿದೆ:
    - ಎ) ಟ್ರಸ್ಟ್ /ಸೊಸೈಟಿಯ ನೋಂದಣಿ ಪ್ರಮಾಣ ಪತ್ರ.
    - ಬಿ) ಬೈಲಾ ಪ್ರತಿ
    - ಸಿ) ಇಲಾಖೆಯಿಂದ ಸಂಸ್ಥೆಗೆ ಈಗಾಗಲೇ ಯಾವುದೇ ಶಾಲೆ ನಡೆಸಲು ಅನುಮತಿ ದೊರೆತಿದ್ದಲ್ಲಿ ಅದರ ಪ್ರತಿ.
    - ಡಿ) ಶಾಶ್ವತ ಅನುದಾನ ರಹಿತವಾಗಿ ಶಾಲೆಯನ್ನು ನಡೆಸುವುದಾಗಿ ರೂ. 20.00 ಗಳ ಛಾಪಾ ಕಾಗದದಲ್ಲಿ ಬರೆದುಕೊಟ್ಟ ಪ್ರಮಾಣಪತ್ರ. (ಲಗತ್ತಿಸಿರುವ ನಮೂನೆಯಲ್ಲಿ)
    - ಎಫ್) ಶಾಲೆಯ ವ್ಯವಹಾರವನ್ನು ಗಮನಿಸಲು ಆಡಳಿತ ಮಂಡಳಿ ಕಾರ್ಯದರ್ಶಿಯವರಿಗೆ ನೀಡಿದ ಠರಾವು ಪ್ರತಿ.
    - ಜಿ) ಖಾಸಗಿ ಪ್ರೌಢ ಶಾಲೆಯನ್ನು ತೆರೆಯುವ ಬಗ್ಗೆ ಆಡಳಿತ ಮಂಡಳಿಯ ಠರಾವು ಪ್ರತಿ
    - ಜಿ) ಸಂಸ್ಥೆಯ ಹೆಸರಿನಲ್ಲಿ ಕನಿಷ್ಠ 5 ಲಕ್ಷ ರೂ.ಗಳ ಆರ್ಥಿಕ ಭದ್ರತೆಯನ್ನು ಹೊಂದಿದ ಬ್ಯಾಂಕ್ ಪುಸ್ತಕದ ಜೆರಾಕ್ಸ್ ಪ್ರತಿ ಮತ್ತು ಬ್ಯಾಂಕ್ ಉಳಿಕೆಯ ದೃಢೀಕರಣ ಅಥವಾ ಸಂಸ್ಥೆ ಹಸರಿನಲ್ಲಿ 5 ಲಕ್ಷ ರೂ. ಬೆಲೆ ಬಾಳುವ ಸ್ಥಿರಾಸ್ತಿಯ ನೋಂದಣಿಯಾದ ಮೌಲ್ಯಮಾಪಕರಿಂದ ಮೌಲೀಕರಣ ಪತ್ರ.

ಹೆಚ್)  ಕಟ್ಟಡದ ನೀಲಿ ನಕ್ಷೆ, ಛಾಯಾ ಪ್ರತಿ ಇತ್ಯಾದಿ.

ಐ) ಲೆಕ್ಕ ಪತ್ರ ಪರಿಶೋಧಕರ ವರದಿ.

ಜೆ) ಮ್ಯಾನೇಜಿಂಗ್ ಕಮಿಟಿಯ ಎಲ್ಲಾ ಸದಸ್ಯರು ಒಂದೇ ಕುಟುಂಬದವರಲ್ಲವೆಂದು ದೃಢೀಕರಣ ಪತ್ರ.

6) ರೂ. 10000–00 ಗಳ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಕ್ರಾಸ್ ಮಾಡಿದ ಚೆಕ್ಕನ್ನು ಆಯುಕ್ತರು, ಸಾರ್ವಜನಿಕ ಶಿಕ್ಷನ ಇಲಾಖೆ, ಬೆಂಗಳೂರು ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಮೂಲ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕು.

7) ನೋಂದಣಿ ಮಾಡಿಸಿಕೊಳ್ಳಬೇಕಾದ ಪ್ರಾಧಿಕಾರ – ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಹಾಗೂ ಮಂಜೂರಾತಿ ನೀಡುವ ಪ್ರಾಧಿಕಾರ ನಿರ್ದೇಶಕರು (ಕರ್ನಾಟಕ ಶಿಕ್ಷಣ ಕಾಯ್ದೆ 1983 ನಮೂನೆ 1 ರಂತೆ ಅರ್ಜಿ ಸಲ್ಲಿಸಿ ನೋಂದಾವಣೆ ಮಾಡಿಸಿಕೊಳ್ಳುವುದು) (ಅರ್ಜಿ ನಮೂನೆ ಲಗತ್ತಿಸಿದೆ)

8) ಪ್ರಾರಂಭಿಸಬೇಕಾದ ಶಾಲೆಯ ನಿವೇಶನ ವಿವರ, ಸೂಕ್ತವಾದ ಕಟ್ಟಡ, (ಪ್ರತಿ ಕೊಠಡಿಗೆ ಗಾಳಿ ಬೆಳಕಿನ ಸೌಲಭ್ಯ ಮತ್ತು ಪ್ರತಿ ಕೊಠಡಿಯ ಉದ್ದ x ಅಗಲ  ಅಳತೆಯ ವಿವರ ಸಲ್ಲಿಸಬೇಕು) ಆಟದ ಮೈದಾನ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುಚ್ಛಕ್ತಿ ಪೂರೈಕೆ ಹಾಗೂ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಪೀಠೋಪಕರಣಗಳು, ಕ್ರೀಡಾ ಸಾಮಗ್ರಿಗಳು ಹಾಗೂ ಪಾಠೋಪಕರಣಗಳ ವ್ಯವಸ್ಥೆಗಳನ್ನು ಒದಗಿಸಬೇಕು (ರಾಜ್ಯ ಸರ್ಕಾರವು ನಿಗದಿಪಡಿಸಿದಂತೆ)

9) ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಶಾಲೆಯ ಅನುಮತಿಯನ್ನು ಯಾವುದೇ ಹಂತದಲ್ಲಿ ಶಿಕ್ಷಣ ಕಾಯ್ದೆ 1983 ರನ್ವಯ ರದ್ದುಗೊಳಿಸಲಾಗುವುದು.

10) ನೋಂದಣಿ ಇಲ್ಲದೆ ಶಿಕ್ಷಣ ಸಂಸ್ಥೆಯನ್ನು ನಡೆಸಿದರೆ, ನೋಂದಣಿಗಾಗಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಿದ ನಂತರವೂ ಶಿಕ್ಷಣ ಸಂಸ್ಥೆಯನ್ನು ನಡೆಸಿದರೆ ಅಥವಾ ನೋಂದಣಿಯನ್ನು ರದ್ದುಗೊಳಿಸಿದ ನಂತರವೂ ಶಿಕ್ಷಣ ಸಂಸ್ಥೆಯನ್ನು ನಡೆಸಿದರೆ ಮೂರು ವರ್ಷಗಳವರೆಗೆ ಸಜೆ ಮತ್ತು ರೂ. 5,000–00 ಗಳ ದಂಡದ ನ್ಯಾಯಾಲಯದ ಶಿಕ್ಷೆ ಅನ್ವಯಿಸುವುದು.

# ಪ್ರಮಾಣ ಪತ್ರ
## (ಸಕ್ಷಮ ನ್ಯಾಯಾಲಯ ಪ್ರಾಧಿಕಾರಿಗಳ ಮುಂದೆ)

ಕಾರ್ಯದರ್ಶಿ / ಅಧ್ಯಕ್ಷರು (ಸಂಸ್ಥೆಯ ಹೆಸರು ಮತ್ತು ವಿಳಾಸ ............................................................................................................................................................................................................................................................ಈ ಶಿಕ್ಷಣ ಸಂಸ್ಥೆಯ ವತಿಯಿಂದ ನಡೆಸುತ್ತಿರುವ (ಶಾಲೆಯ ಹೆಸರು ಮತ್ತು ವಿಳಾಸ) ...................................................................................................................................................................................................ಶಾಲೆಯ ಬಗ್ಗೆ ಪ್ರಮಾಣೀಕರಿಸುವುದೇನೆಂದರೆ, ನಮ್ಮ ಶಾಲೆಯ 8ನೇ ತರಗತಿಯನ್ನು 2000 ................................ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಿ ಪ್ರಸ್ತುತ ....................ತರಗತಿಗಳನ್ನು ನಡೆಸುತ್ತಿರುತ್ತೇವೆ. ನಮ್ಮ ಶಾಲೆಗೆ ಅನುಮತಿ ನೀಡುವಂತೆ ಕೋರಿರುವ ಪ್ರಸ್ತಾವನೆಯನ್ನು ಸಲ್ಲಿಸುತ್ತಾ ಸರ್ಕಾರದ ಪ್ರಸ್ತುತ ನೀತಿಯಂತೆ ಶಾಶ್ವತ ಅನುದಾನ ರಹಿತವಾಗಿ ಶಾಲೆಯನ್ನು ನಡೆಸುತ್ತೇನೆಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇನೆ.

ಸರ್ಕಾರದ ಪ್ರಸ್ತುತ ಧೋರಣೆಯನ್ವಯ ಮೇಲೆ ಸೂಚಿಸಿರುವಂತೆ ಶಾಲೆ ನಡೆಸುತ್ತೇವೆಂದು ಮತ್ತು ಈ ರೀತಿ ನಡೆಸದಿದ್ದಲ್ಲಿ ಸರ್ಕಾರವು ನೀಡಬಹುದಾದ ಅನುಮತಿಯನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಸಹ ಪ್ರಮಾಣೀಕರಿಸುತ್ತೇನೆ.

ಸ್ಥಳ: ಕಾರ್ಯದರ್ಶಿ / ಅಧ್ಯಕ್ಷರು

ದಿನಾಂಕ: (ಸಂಸ್ಥೆ / ಶಾಲೆಯ ಮೊಹರು)

## ಚೆಕ್ ಲಿಸ್ಟ್ (ಪ್ರೌಢಶಾಲೆ)

1) ಅರ್ಜಿ ನಮೂನೆ 1 ಮತ್ತು 2
2) ಆಡಳಿತ ಮಂಡಳಿ ಸದಸ್ಯರ ಹೆಸರು, ತಂದೆ ಹಸರು, ವಯಸ್ಸು, ವಿದ್ಯಾರ್ಹತೆ, ವಿಳಾಸ, ಉದ್ಯೋಗ.
3) ಸಂಸ್ಥೆ ನೊಂದಾಯಿಸಿರುವ ಟ್ರಸ್ಟ್ ಅಥವಾ ಸೊಸೈಟಿಯ ನೋಂದಣಿ ಪ್ರತಿ
4) ಬೈಲಾ ಪ್ರತಿ
5) ರೂ. 10,000–00 ಸಾವಿರಗಳ ಡಿಮ್ಯಾಂಡ್ ಡ್ರಾಫ್ಟ್‌ನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಹೆಸರಿನಲ್ಲಿ.
6) ಶಾಶ್ವತ ಅನುದಾನ ರಹಿತವಾಗಿ ಶಾಲೆ ನಡೆಸಲು ಒಪ್ಪಿರುವ ಬಗ್ಗೆ ಪ್ರಮಾಣ ಪತ್ರ
7) ಕಟ್ಟಡ ನಕ್ಷೆ) ಹಾಲಿ ಆಟದ ಮೈದಾನದ ವಿವರ (ಪ್ರತಿ ಕೊಠಡಿ ವಿಸ್ತೀರ್ಣ)
8) ಕಟ್ಟಡ ಮಾಲೀಕತ್ವದ ಬಗ್ಗೆ ವಿವರ ಅಥವಾ ಬಾಡಿಗೆ ಕಟ್ಟಡವಾಗಿದ್ದರೆ ಒಪ್ಪಂದದ ಕರಾರು ಪತ್ರ.
9) ಶಿಕ್ಷಕರ ಹೆಸರು, ವಿಳಾಸ, ವಿದ್ಯಾರ್ಹತೆ, ಅನುಭವದ ಬಗ್ಗೆ ಪೂರ್ಣ ಮಾಹಿತಿ.
10) ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಪೀಠೋಪಕರಣಗಳ ಪಟ್ಟಿ
11) ಪೀಠೋಪಕರಣಗಳು ಹಾಗೂ ಬೋಧನೋಪಕರಣಗಳ ಪಟ್ಟಿ
12) ಪ್ರಯೋಗಾಲಯ ವಸ್ತುಗಳ ಪಟ್ಟಿ
13) ಗ್ರಂಥಾಲಯದಲ್ಲಿರುವ ಪುಸ್ತಕಗಳ ವಿವರ ಹಾಗೂ ಅಂದಾಜು ಮಾತ್ರ.
14) ಸಂಸ್ಥೆಯ ಹಸರಿನಲ್ಲಿ ಕನಿಷ್ಠ ರೂ. 5,00,000–00 ಬ್ಯಾಂಕಿನಲ್ಲಿರುವ ಬಗ್ಗೆ ಮಾಹಿತಿ ಅಥವಾ ಸಂಸ್ಥೆಯ ಹೆಸರಿನಲ್ಲಿ ರೂ. 5,00,000–00 ಗಳ ಸ್ಥಿರಾಸ್ತಿಯಿರುವ ಬಗ್ಗೆ ವ್ಯಾಲ್ಯುಯೇಷನ್ ಸರ್ಟಿಫಿಕೇಟನ್ನು ನಿಗದಿತ ವ್ಯಾಲ್ಯುಯೇಟರ್ ರವರಿಂದ ಪ್ರಮಾಣ ಪತ್ರ.
15) ಆಡಳಿತ ಮಂಡಳಿಯು ಯಾವ ವರ್ಗಕ್ಕೆ ಸೇರಿದ (ಎಸ್.ಸಿ/ಎಸ್.ಟಿ) ಹಿಂದುಳಿದ ವರ್ಗ ಅಥವಾ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದೆಯೇ ಎಂಬುದರ ಬಗ್ಗೆ ವಿವರ.
16) ಸಂಸ್ಥೆಯ ಇತ್ತೀಚಿನ ಲೆಕ್ಕಪತ್ರ ವರದಿ **(Audit Report)**
17) ಮ್ಯಾನೇಜಿಂಗ್ ಕಮಿಟಿಯ ಎಲ್ಲಾ ಸದಸ್ಯರು ಒಂದೇ ಕುಟುಂಬದವರಲ್ಲವೆಂದು ದೃಢೀಕರಣ ಪತ್ರ.
18) ಶಾಲೆ ಆಡಳಿತ ಮಂಡಳಿಯು ಕಾರ್ಯದರ್ಶಿ / ಅಧ್ಯಕ್ಷರು ಇವರನ್ನು ಆಯ್ಕೆ ಅಥವಾ ನೇಮಕ ಮಾಡಿರುವ ಹಾಗೂ ಇವರಿಗೆ ಶಾಲೆ ತೆರೆಯಲು ವ್ಯವಹರಿಸಲು ನೀಡಿರುವ ಠರಾವು
19) ಕಾರ್ಯದರ್ಶಿ/ ಅಧ್ಯಕ್ಷರು / ಕರೆಸ್ಪಾಂಡೆಂಟ್ ರವರ ಪೂರ್ಣ ವಿಳಾಸ (ಪಿನ್ ಕೋಡ್ ಸಹಿತ ಹಾಗೂ ದೂರವಾಣಿ ಇದ್ದಲ್ಲಿ ಅದರ ಸಂಖ್ಯೆ)
20) ಶಾಲಾ ಕಾರ್ಯನಿರ್ವಾಹಕ ಮಂಡಳಿ ಸದಸ್ಯರ ಪಟ್ಟಿ.

## ನಮೂನೆ –1

(ನಿಯಮ 3 ಉಪನಿಯಮ (1) ಕರ್ನಾಟಕ ಶಿಕ್ಷಣ ಸಂಸ್ಥೆ ವರ್ಗೀಕರಣ ಮತ್ತು ನೋಂದಣಿ ನಿಯಮ 1997)

ಗೆ:

ನಿರ್ದೇಶಕರು
(ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ,
.ಹೊಸ ಸಾರ್ವಜನಿಕ ಕಚೇರಿಗಳು,
ನೃಪತುಂಗ ರಸ್ತೆ, ಬೆಂಗಳೂರು–560 001

ಇವರ ಮುಖಾಂತರ

ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
...............................................ಜಿಲ್ಲೆ
....................................................

ಮಾನ್ಯರೆ,

.................................................................................. (ಶಿಕ್ಷಣ ಸಂಸ್ಥೆಯ ಹೆಸರು ಮತ್ತು ವಿಳಾಸ) ........................................................................................... ಪರವಾಗಿ ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ್ ನಂ. 1, 1995) ರಂತೆ ಸೆಕ್ಷನ್ 31 ರಂತೆ ಹೊಸ ಖಾಸಗೀ ಪ್ರೌಢ ಶಾಲೆಯನ್ನು ತೆರೆಯಲು ಈ ಕೆಳಕಂಡ ಮಾಹಿತಿಯೊಂದಿಗೆ ಅರ್ಜಿಯನ್ನು ಸಲ್ಲಿಸಲಾಗಿದೆ.

1 ಹೊಸ ಪ್ರೌಢಶಾಲೆ ತೆರೆಯಲು ಉದ್ದೇಶಿಸಿದ ಸ್ಥಳದ ಹೆಸರು ಮತ್ತು ವಿಳಾಸ

2 ಸಂಸ್ಥೆಯ ಹೆಸರು ಮತ್ತು ವಿಳಾಸ ಅಥವಾ ಗವರ್ನಿಂಗ್ ಕೌನ್ಸಿಲ್ (ಸಂಸ್ಥೆಯ ನೋಂದಣಿಯಾದ ಪ್ರತಿ) ಮೆಮೋರಾಂಡಂ ಆಫ್ ಅಸೋಸಿಯೇಷನ್, ಟ್ರಸ್ಟ್ ಡೀಡ್ ಪ್ರತಿಯನ್ನು ಲಗತ್ತಿಸುವುದು (ಸೆಕ್ಷನ 2(17) ನೋಡಿ)

3 ಉದ್ದೇಶಿತ ಪ್ರೌಢಶಾಲೆಯ ಸ್ಥಾಪನೆಯ ಉದ್ದೇಶಗಳು

4 ಯಾವ ದಿನಾಂಕದಿಂದ ಪ್ರೌಢಶಾಲೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ

5 ಯಾವ ಮಾಧ್ಯಮ

6 ಪ್ರಾರಂಭಿಕ ಪೂರ್ವ ಕ್ರಮಗಳನ್ನು ಸಂಬಂಧಿಸಿದ ಪ್ರಾಧಿಕಾರಿಗಳಿಂದ /ವೃತ್ತಿ ಸಂಸ್ಥೆ/ವಿಶ್ವವಿದ್ಯಾಲಯ ಇತರೆ ಏಜೆನ್ಸಿಗಳಿಂದ ಪಡೆದಿರುವ ಮಾಹಿತಿಗಳು

7 ಈ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಸದರಿ ಆಡಳಿತ ಮಂಡಳಿ/ಗವರ್ನಿಂಗ್ ಕೌನ್ಸಿಲ್ ಇತರೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಲ್ಲಿ ಅವುಗಳ ಪೂರ್ಣ ವಿವರಗಳು

9 ಉದ್ದೇಶಿತ ಸ್ಥಳಗಳಲ್ಲಿನ ಜನರಿಗೆ ಉದ್ದೇಶಿತ ಶಿಕ್ಷಣ ಸೌಲಭ್ಯಗಳನ್ನು ನೀಡುವ ಅಗತ್ಯಗಳ ಬಗ್ಗೆ ಈ ಕೆಳಕಂಡ ಅಂಶಗಳೊಳಗೊಂಡಂತೆ ವಿವರಿಸುವುದು

ಅ) ಕಳೆದ ಜನಗಣತಿ ಆಧಾರದಂತೆ ಪ್ರದೇಶದ ಜನಸಂಖ್ಯೆ.

ಆ) ಸಾಕ್ಷರತಾ ಪ್ರಮಾಣ

ಇ) ಉದ್ದೇಶಿತ ಪ್ರದೇಶದ ಸುತ್ತಮುತ್ತ ಹಾಲಿಯಿರುವ ಪ್ರೌಢ ಶಾಲೆಗಳ ಹೆಸರು/ವಿಳಾಸ

1) ಉದ್ದೇಶಿತ ಶಾಲೆಯಿಂದ ಇರುವ ಅಂತರ
2) ಹಾಲಿ ಇರುವ ಪ್ರೌಢಶಾಲೆಗಳ ಎಲ್ಲಾ ತರಗತಿಗಳಲ್ಲಿರುವ ವಿದ್ಯಾರ್ಥಿ ಸಂಖ್ಯೆ ಹಾಗೂ ಹಾಜರಾತಿ ಸಂಖ್ಯೆ (ತರಗತಿವಾರು)

ಈ) ಉದ್ದೇಶಿತ ಸ್ಥಳದ ಸುತ್ತಮುತ್ತ ಇರುವ ಪೋಷಕ ಪ್ರಾಥಮಿಕ ಶಾಲೆಗಳ ಹೆಸರು, ವಿಳಾಸ:

1) ಅಂತರ
2) ಎಲ್ಲ ಪೋಷಕ ಪ್ರಾಥಮಿಕ ಶಾಲೆಗಳಲ್ಲಿರುವ ಪ್ರತಿ ತರಗತಿಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಹಾಜರಾತಿ (1 ರಿಂದ 7ನೇ ತರಗತಿವರೆಗೆ)
3) ಮೇಲೆ ತೋರಿಸಿರುವ ಪೋಷಕ ಶಾಲೆಗಳ ವಿದ್ಯಾರ್ಥಿಗಳು ಈಗ ಹೋಗುತ್ತಿರುವ ಪ್ರೌಢಶಾಲೆಗಳ ಹೆಸರು ಮತ್ತು ಅವುಗಳ ದೂರ
4) ಹಾಲಿ ಆಡಳಿತ ಮಂಡಳಿ 1 ರಿಂದ 7ನೇ ತರಗತಿಗಳು ನಡೆಸುತ್ತಿರುವ ಬಗ್ಗೆ. 1 ರಿಂದ 4ನೇ ತರಗತಿವರೆಗೆ ಮಾತೃ ಭಾಷೆಯಲ್ಲಿ ಬೋಧಿಸುತ್ತಿರುವ ಬಗ್ಗೆ ಮಾಹಿತಿ

ಉ) ಉದ್ದೇಶಿತ ಪ್ರದೇಶದಲ್ಲಿನ ವಾಸಸ್ಥಳಗಳ ವಿವರ ಮತ್ತು ಹಿಂದುಳಿದಿರುವವರ ವಿಶೇಷತೆಗಳ ವಿವರ ನೀಡುವುದು.

1) ಪರಿಶಿಷ್ಟ ಜಾತಿ/ ವರ್ಗದವರು

2) ಅಂಗವಿಕಲ ಬಾಲಕ/ಬಾಲಕಿಯರು

3) ಅಲ್ಪಸಂಖ್ಯಾತರ ವಸ್ತು ಸ್ಥಿತಿಯನ್ನು ನಿಖರವಾದ ಅಂಕಿ–ಅಂಶಗಳೊಡನೆ ನೀಡುವುದು.

10 ಈ ಕೆಳಕಂಡ ಮಾಹಿತಿಯನ್ನು ಒದಗಿಸುವುದು

ಅ) ಶಿಕ್ಷಣ ಮಸೂದೆ ಮತ್ತು ನಿಯಮಗಳಲ್ಲಿ ತಿಳಿಸಿರುವಂತೆ ಮೂಲಭೂತ ಸೌಲಭ್ಯಗಳನ್ನು ಪಾಠೋಪಕರಣ, ಪೀಠೋಪಕರಣ, ಎಕ್ವಿಪ್‌ಮೆಂಟ್ ಇತ್ಯಾದಿ ಒದಗಿಸಲು ಈಗಿನ ಮಾರುಕಟ್ಟೆ ಲೆಕ್ಕದಂತೆ ತಗಲುವ ಅಂದಾಜು ವೆಚ್ಚ.

ಆ) ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಆಡಿಟ್ ಮಾಡಿಸಿದ ಇತ್ತೀಚಿನ ಬ್ಯಾಲೆನ್ಸ್ ಶೀಟ್ ಜಮಾ ಮತ್ತು ಖರ್ಚಿನ ತಃಖ್ತೆ(ನೋಡಿ ಸೆಕ್ಷನ್ 2(17)

ಇ) ಸಂಸ್ಥೆಯಲ್ಲಿರುವ ನಗದು ಹಣದ ಬಗ್ಗೆ ಬ್ಯಾಂಕ್‌ನವರಿಂದ ದೃಢೀಕರಿಸಿದ ಪ್ರಮಾಣ ಪತ್ರ.

---

ಈ) ನಿಯಮಾವಳಿಯಲ್ಲಿ ತಿಳಿಸಿರುವ ಆಧಾರದಂತೆ ಶಾಲಾ ಕಟ್ಟಡಕ್ಕಾಗಿ ಆಟದ ಮೈದಾನಕ್ಕಾಗಿ ಸಂಸ್ಥೆಯು ಹೊಂದರುವ ಜಮೀನಿನ ವಿಸ್ತೀರ್ಣ ಅಳತೆ ಇತ್ಯಾದಿಗಳ ಬಗ್ಗೆ ಮೂಲ ದಾಖಲಾತಿಗಳ ಫೋಟೋ ಪ್ರತಿಯನ್ನು ಲಗತ್ತಿಸಬೇಕು.

ಉ) ನಿಯಮಾವಳಿಯಲ್ಲಿರುವಂತೆ ನಿಗದಿತ ಶಾಲಾ ಕಟ್ಟಡ ಹೊಂದಿರುವ ಬಗ್ಗೆ ವಿವರವಾದ ನೀಲಿ ನಕ್ಷೆ.

ಊ) ಸದರಿ ಗವರ್ನಿಂಗ್ ಕೌನ್ಸಿಲ್ ನಡೆಸುತ್ತಿರುವ ಇತರೆ ಶಿಕ್ಷಣ ಸಂಸ್ಥೆಗಳ ಇತ್ತೀಚಿನ ವಾರ್ಷಿಕ ಲೆಕ್ಕಪತ್ರಗಳ ಆಡಿಟ್ ಆಗಿರುವ ಮತ್ತು ಪ್ರಮಾಣೀಕರಿಸಿದ ಪ್ರತಿಗಳನ್ನು ಲಗತ್ತಿಸಬೇಕು.

ಋ) ಶಿಕ್ಷಕ ಸಿಬ್ಬಂದಿಯ ಹೆಸರು, ವಿಳಾಸ, ವಿದ್ಯಾರ್ಹತೆ, ಅನುಭವ ಹೊಂದಿರುವ

ಬಗ್ಗೆ ಮಾಹಿತಿ, ಸರ್ಕಾರ ಅಥವ ಇತರೆ ಪ್ರಾಧಿಕಾರ ನಿಗದಿಪಡಿಸಿದ ಆಯಾ ವೃಂದದಂತೆ ಇರಬೇಕು

ಎ) ಗವರ್ನಿಂಗ್ ಕೌನ್ಸಿಲ್ ಸದರಿ ಸಂಸ್ಥೆಯ ಕಾರ್ಯದರ್ಶಿಯವರಿಗೆ ಅರ್ಜಿಯನ್ನು ಸಲ್ಲಿಸಲು ಅನುಮತಿ ನೀಡಿದ ನಿರ್ಣಯದ ಪ್ರತಿ

ಏ) ಕಾರ್ಯದರ್ಶಿ/ಕರೆಸ್ಪಾಂಡೆಂಟ್ ರವರ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ

11 ಗವರ್ನಿಂಗ್ ಕೌನ್ಸಿಲ್‌ನ ಎಲ್ಲಾ ಸದಸ್ಯರ ಹೆಸರು, ತಂದೆಯ ಹೆಸರು, ವಯಸ್ಸು, ವಿದ್ಯಾರ್ಹತೆ, ವೃತ್ತಿ ಇತ್ಯಾದಿ ಇವುಗಳ ವಿವರ ನೀಡುವುದು

12 ಮ್ಯಾನೇಜಿಂಗ್ ಕಮಿಟಿಯ ಎಲ್ಲಾ ಸದಸ್ಯರ ಹೆಸರು, ತಂದೆಯ ಹೆಸರು, ವಯಸ್ಸು, ವಿದ್ಯಾರ್ಹತೆ ವೃತ್ತಿ ಇತ್ಯಾದಿ ವಿವರಗಳನ್ನು ನೀಡುವುದು (ಸೆಕ್ಷನ್ 2(ಎ) ರಂತೆ) ಸದಸ್ಯರು ಒಂದೇ ಕುಟುಂಬದವರಲ್ಲವೆಂದು ದೃಢೀಕರಣ

13 ಇತರೇ ಯಾವುದಾದರೂ ಮಾಹಿತಿ ನೀಡಲು ಇಚ್ಛೆಪಟ್ಟಲ್ಲಿ ನೀಡುವುದು.

14 ನೋಂದಣಿ ಶುಲ್ಕ: ರೂ. 10,000–00 ಕಟ್ಟಿರುವ ವಿವರ (ಡಿಮ್ಯಾಂಡ್ ಡ್ರಾಫ್ಟ್ ಸಂಖ್ಯೆ, ದಿನಾಂಕ ಹಾಗೂ ಬ್ಯಾಂಕ್ ವಿವರ)

14. ಮೇಲ್ಕಂಡ ಮಾಹಿತಿಯು ನನ್ನ ಗಮನಕ್ಕೆ ಬಂದಿರುವಂತೆ ಸತ್ಯ ಹಾಗೂ ನಿಖರವಾಗಿರುವುದಾಗಿ ಪ್ರಮಾಣೀಕರಿಸುತ್ತೇನೆ.

ದಿನಾಂಕ: ..........................ಶಿಕ್ಷಣ ಸಂಸ್ಥೆಯ ಪರವಾಗಿ

ಸ್ಥಳ: ಕಾರ್ಯದರ್ಶಿಯ ಸಹಿ

(ಹೆಸರು, ವಿಳಾಸ ಮತ್ತು ಕಚೇರಿ ಮೊಹರು)

## 15) ಅರ್ಜಿದಾರರ, ಸಂಸ್ಥೆಯ ದೃಢೀಕರಣ

ಗವರ್ನಿಂಗ್ ಕೌನ್ಸಿಲ್‌ನ ಆಡಳಿತ ಮಂಡಳಿಯು ನಿಯಮ(4(4) 1ರಿಂದ 12 ರವರೆವಿಗೆ ಬದ್ಧರಾಗಿರುವುದಾಗಿ ದೃಢೀಕರಿಸಿದೆ.

...................... ಆಡಳಿತ ಮಂಡಳಿ ಪರವಾಗಿ

.................................................................

ಕಾರ್ಯದರ್ಶಿಯವರ ಸಹಿ

(ಹೆಸರು, ವಿಳಾಸಮತ್ತು ಸಂಸ್ಥೆಯ ಮೊಹರು)

## 16) ಉಪನಿರ್ದೇಶಕರ ದೃಢೀಕರಣ

ಮೇಲ್ಕಂಡ ಮಾಹಿತಿಗಳನ್ನು ಪರಿಶೀಲಿಸಿ, ಸರಿಯಿದೆಯೆಂದು/ಸರಿ ಇಲ್ಲವೆಂದು ದೃಢೀಕರಿಸುತ್ತೇನೆ ಹಾಗೂ ಶಾಲೆ ಮಂಜೂರು ಮಾಡಬಹುದು/ತಿರಸ್ಕರಿಸಬಹುದೆಂದು ಅಭಿಪ್ರಾಯಪಡುತ್ತೇನೆ.

.......................................................

ಉಪನಿರ್ದೇಶಕರು

# ನಮೂನೆ–2

## ಕರ್ನಾಟಕ ರಾಜ್ಯದಲ್ಲಿ ಖಾಸಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಪರಿಶೀಲಿಸಬೇಕಾದ ಮುಖ್ಯಾಂಶಗಳು ಕಡ್ಡಾಯವಾಗಿ

(ಉಪನಿರ್ದೇಸಕರ ಹಂತದಲ್ಲಿ)

| | | |
|---|---|---|
| 1 | ಆಡಳಿತ ಮಂಡಳಿಯ ಹೆಸರು, ಅಂಚೆ ವಿಳಾಸ (ಪಿನ್ ಕೋಡ್) | |
| 2 | ಆಡಳಿತ ಸಂಸ್ಥೆ ಯಾವ ವರ್ಗಕ್ಕೆ ಸೇರಿದೆ (ಪ.ಜಾತಿ/ಪ.ಪಂಗಡ, ಅಲ್ಪಸಂಖ್ಯಾತ, ಸಾಮಾನ್ಯ) | |
| 3 | ಶಾಲೆಯ ಹೆಸರು –ಪ್ರಾರಂಭಿಸಬೇಕಾದ ಸ್ಥಳ ಅಂಚೆ ವಿಳಾಸ (ಪಿನ್ ಕೋಡ್) | |
| 3(ಎ) | ಸದರಿ ಆಡಳಿತ ಮಂಡಳಿಯವರು ಪ್ರೌಢಶಾಲೆಯನ್ನು ಕೋರಿರುವ ಸ್ಥಳದಲ್ಲಿ ಅಧಿಕೃತವಾಗಿ 1 ರಿಂದ 7ನೇ ತರಗತಿವರೆಗೆ ಪ್ರಾಥಮಿಕ ಶಾಲೆಯನ್ನು ನಡೆಸುತ್ತಿರುವರೇ ಹಾಗಿದ್ದಲ್ಲಿ ಮಾಧ್ಯಮ ಹಾಗೂ 7ನೇ ತರಗತಿ ದಾಖಲಾತಿ/ಹಾಜರಾತಿ ವಿವರ. | |
| 4 | ಕೋರಿರುವ ಬೋಧನಾ ಮಾಧ್ಯಮ (ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಾಲೆ ಮಂಜೂರಾತಿ ಕೋರಿದ್ದಲ್ಲಿ ತರಗತಿ 1 ರಿಂದ 4ರವರೆಗೆ ಕನ್ನಡ ಅಥವಾ ಮಾತೃ ಭಾಷಾ ಮಾಧ್ಯಮವನ್ನು ಅಳವಡಿಸಿ ಕೊಂಡಿರುವುದರ ಬಗ್ಗೆ ಪರಿಶೀಲಿಸಿ ತಿಳಿಸುವುದು (3 ಮಂದಿ ಸದಸ್ಯರ ಸಮಿತಿ ವರದಿಯ ಆಧಾರದ ಮೇರೆ) | 5 |
| 5 | 1. ಕಿ.ಮೀ. ಅಂತರದಲ್ಲಿರುವ ಪ್ರೌಢಶಾಲೆಯ ಹೆಸರುಗಳು<br>2. ಬೋಧಿಸುತ್ತಿರುವ ಮಾಧ್ಯಮ<br>3. ದಾಖಲಾತಿ /ಹಾಜರಾತಿ | |
| 6 | 1. ಪೋಷಕ /ಹಿರಿಯ ಪ್ರಾಥಮಿಕ ಶಾಲೆಗಳ ಹೆಸರು<br>2. ಬೋಧಿಸುತ್ತಿರುವ ಮಾಧ್ಯಮ<br>3. ದಾಖಲಾತಿ / ಹಾಜರಾತಿ (ಅಧಿಕೃತ ವಿಭಾಗಗಳು ಮಾತ್ರ) | |

| | | |
|---|---|---|
| 7 | ಸ್ಥಳದ ಜನಸಂಖ್ಯೆ | |
| 8 | ಕಟ್ಟಡದ ಬಗ್ಗೆ ಮಾಹಿತಿ –ಸ್ವಂತ / ಬಾಡಿಗೆ<br>1. ಬೇಕಾಗುವಷ್ಟು ಕೊಠಡಿಗಳನ್ನು ಒದಗಿಸಲಾಗಿದೆಯೇ<br>2. ಕಚೇರಿ/ಶಿಕ್ಷಕರಿಗೆ ಗ್ರಂಥಾಲಯ – ಪುಸ್ತಕಗಳು ಪ್ರಯೋಗಾಲಯ (ಮೌಲ್ಯ) ದಾಸ್ತಾನು – ಒಟ್ಟು ಬೆಲೆ ಮಳಿಗೆ, ಕ್ರೀಡಾ ಕೊಠಡಿ : ಇವುಗಳಿಗೆ ಪ್ರತ್ಯೇಕ ಕೊಠಡಿಗಳಿವೆಯೇ?<br>3. ಕುಡಿಯುವ ನೀರಿನ ವ್ಯವಸ್ಥೆ.<br>4. ಶೌಚಾಲಯ ವ್ಯವಸ್ಥೆ | |
| 9 | 1. ಆಟದ ಮೈದಾನ | |
| | 2. ಹೊರಾಂಗಣ ಆಟಗಳಿಗೆ ಆಟದ ಮೈದಾನವಿದೆಯೇ? | |
| 10 | ಆಡಳಿತ ಮಂಡಳಿಯ ಆರ್ಥಿಕ ಪರಿಸ್ಥಿತಿ: | |
| | 1. ತಮ್ಮ ಆಡಳಿತ ಸಂಸ್ಥೆಯ ಉಳಿತಾಯ ಖಾತೆಯಲ್ಲಿ 5 ಲಕ್ಷ ರೂ.ಗಳ ಶಿಲ್ಕು ಇಡಲಾಗಿದೆಯೇ ಅಥವಾ 5 ಲಕ್ಷ ರೂ.ಗಳ ಬೆಲೆ ಬಾಳುವ ಆಸ್ತಿ ಇದೆಯೇ ಮಾಹಿತಿ ನೀಡುವುದು. | |
| | 2. ಆಡಳಿತ ಸಂಸ್ಥೆಯ ಲೆಕ್ಕಗಲ ಪರಿಶೋಧನೆ ಬಗ್ಗೆ ಲೆಕ್ಕ ಪರಿಶೋಧಕರ ವರದಿ ಪಡೆಯಲಾಗಿದೆಯೆ (ಪ್ರತಿ ಲಗತ್ತಿಸುವುದು) | |
| 11 | ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡುವುದರ ಬಗ್ಗೆ ಸಕಾರಣಗಳೊಂದಿಗೆ ಉಪನಿರ್ದೇಶಕರ ಸ್ಪಷ್ಟ ಅಭಿಪ್ರಾಯ/ಪ್ರಸ್ತಾವನೆ ಪರಿಶೀಲಿಸುವಾಗ ಈ ಕೆಳಗೆ ನಮೂದಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು. | |
| | 1. ಜನಸಂಖ್ಯೆ | |
| | 2. ಈಗಿರುವ ಹಿ.ಪ್ರಾ/ಪ್ರೌಢಶಾಲೆಗೂ ಇರುವ ಅಂತರ | |
| | 3. ದಾಖಲಾತಿ / ಹಾಜರಾತಿ | |
| | 4. ಈಗಿರುವ ಶಾಲೆಗಳ ಅಂತರ | |

| | | |
|---|---|---|
| | 5. ಸದರಿ ಸ್ಥಳದಲ್ಲಿ ಶಾಲೆಯನ್ನು ಪ್ರಾರಂಭಿಸಲು ಅಗತ್ಯತೆ. | |
| | ಅ) ಹಿಂದುಳಿದಿರುವಿಕೆ (ಆ) ಪ.ಜಾ/ಪ.ಪಂ ಜನ ಹೆಚ್ಚಾಗಿರುವುದು (ಇ) ಹೆಣ್ಣು ಮಗುವಿನ ಹಿತದೃಷ್ಟಿ (ಈ) ಅಂಗವಿಕಲರು (ಉ) ಅಲ್ಪಸಂಖ್ಯಾತರ ವರ್ಗ ಜನ ಹೆಚ್ಚಾಗಿರುವುದು (ಊ) ಸಾಕ್ಷರತಾ ಪ್ರಮಾಣ ಮುಂತಾದ ಅಂಶಗಳು | |
| 12 | ಸದರಿ ಶಾಲೆಗೆ ಅನುಮತಿ ನೀಡುವುದರ ಬಗ್ಗೆ ಸುತ್ತಮುತ್ತಲಿನ ಶಾಲಾ ಮುಖ್ಯಸ್ಥರು ಆಕ್ಷೇಪಣೆ ಸಲ್ಲಿಸಿರುವರೆ? ಹಾಗಿದ್ದಲ್ಲಿ, ಸದರಿ ಆಕ್ಷೇಪಣೆ ಬಗ್ಗೆ ಉಪನಿರ್ದೇಶಕರು, ತಮ್ಮ ಅಭಿಪ್ರಾಯ ತಿಳಿಸುವುದು | |
| 13 | ಶಾಶ್ವತ ಅನುದಾನ ರಹಿತವಾಗಿ ಶಾಲೆ ನಡೆಸುವುದರ ಬಗ್ಗೆ ರೂ. 20–00 ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆಸಿಕೊಂಡು ಸಲ್ಲಿಸುವುದು | |
| 14 | ಇಲಾಖೆಯ/ಸರ್ಕಾರದ ಅನುಮತಿ ಇಲ್ಲದೆ ಶಾಲೆಯನ್ನು ಪ್ರಾರಂಭಿಸಬಾರದೆಮಬುದಾಗಿ ಸದರಿ ಸಂಸ್ಥೆಯವರಿಗೆ ತಿಳಿಸುವುದು. ಅದರ ಪ್ರತಿಯನ್ನು ಸಲ್ಲಿಸುವುದು | |
| 15 | ಲಗತ್ತಿಸಬೇಕಾದ ಅಡಕಗಳು:<br>1) ಕಟ್ಟಡ ಭಾವ ಚಿತ್ರ ಮತ್ತು<br>2) ಆಟದ ಮೈದಾನದ ಭಾವ ಚಿತ್ರಗಳು<br>3) ಉಪನಿರ್ದೇಶಕರ ವಿವರವಾದ ಸ್ಥಳ ತನಿಖಾ ವರದಿ. | |

ಉಪನಿರ್ದೇಶಕರು

ಸಾರ್ವಜನಿಕ ಶಿಕ್ಷಣ ಇಲಾಖೆ

.......................................ಜಿಲ್ಲೆ

..............................................